ಓ ಎಸ್ ನಂ:84/2022
ಪಿ.ಡಬ್ಲ್ಯೂ:01

**ದಿನಾಂಕ:29-03-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವೆರದ ಪಾಟೀ ಸವಾಲು: ಶ್ರೀ ಬಿ ಟಿ ಪ್ರತಿವಾದಿ ಪರ ವಕೀಲರಿಂದ

ಪ್ರತಿವಾದಿಯು ಸಾಲವನ್ನು ಕೇಳಿದ ದಿನಾಂಕ ಮತ್ತು ತಿಂಗಳು ನನಗೆ ನೆನಪಿಲ್ಲ. 2019 ನೇ ಸಾಲಿನಲ್ಲಿ ಸಾಲವನ್ನು ಕೇಳಿದ್ದರು. ಪ್ರತಿವಾದಿಯು ನನ್ನ ಬಳಿ ಸಾಲವನ್ನು ಕೇಳುವಾಗ ಯಾರು ಹಾಜರು ಇರಲಿಲ್ಲ. ಪ್ರತಿವಾದಿಯು ತನ್ನ ಹೋಲದಲ್ಲಿ ಸಾಲವನ್ನು ಕೇಳಿದ್ದರು. ಪ್ರತಿವಾದಿಯು ಸಾಲವನ್ನು ಕೇಳಿದ ಎಷ್ಟು ದಿನದ ನಂತರ ನಾನು ಸಾಲವನ್ನು ನೀಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯು ಮನೆ ಕಟ್ಟಿಸಲು ಮತ್ತು ಜಮೀನಿನ ಉದ್ದಾರಕ್ಕಾಗಿ ನನ್ನ ಸಾಲವನ್ನು ಕೇಳಿದ್ದರು. ಸದರಿ ವಿಚಾರವನ್ನು ನಾನು ನನ್ನ ದಾವೆಯಲ್ಲಿ ನಿರ್ದಿಷ್ಟವಾಗಿ ನಮೂದು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನ್ನ ವಕೀಲರ ಬಳಿ ತಿಳಿಸಿದ್ದೇನು ಎಂದು ಉತ್ತರಿಸುತ್ತಾರೆ. ನಾನು ನನ್ನ ಬಳಿಯಿದ್ದ ಕುರಿಗಳನ್ನು ಮಾರಾಟ ಮಾಡಿ ಬಂದ ಹಣದಿಂದ ಪ್ರತಿವಾದಿಗೆ ಸಾಲವನ್ನು ನೀಡಿರುತ್ತೇನೆ. ನನ್ನ ಬಳಿ 115 ಕುರಿಗಳನ್ನು ಮಾರಾಟ ಮಾಡಿ ಬಂದ ಹಣವನ್ನು ಪ್ರತಿವಾದಿಗೆ ಸಾಲವಾಗಿ ನೀಡಿರುತ್ತೇನೆ. ಪ್ರತಿವಾದಿಯು ನನ್ನ ಬಳಿ ವಿಶ್ವಾಸದಿಂದ ಇದ್ದು ಸದರಿಯವರು ಸಾಲವನ್ನು ಕೇಳಿದಾಗ ನನ್ನ ಬಳಿ ಇದ್ದ ಹಣವನ್ನು ಪ್ರತಿವಾದಿಗೆ ಸಹಾಯ ಮಾಡಲು ಸಾಲವನ್ನು ನೀಡಿದ್ದೇನು.

3 ನೇ ತಿಂಗಳು 2019 ನೇ ಸಾಲಿನಲ್ಲಿ ನನ್ನ ಕುರಿಗಳನ್ನು ಮಾರಾಟ ಮಾಡಿದ್ದೇನು. ಸದರಿ ಕುರಿಗಳ ಮಾರಾಟದಿಂದ ಅಂದಾಜು 5 ಲಕ್ಷ ಹಣ ಬಂದಿತ್ತು. ಸದರಿ ಕುರಿಗಳನ್ನು ದೊಣ್ಣೆಹಳ್ಳಿ ತಿಪ್ಪೇಸ್ವಾಮಿ, ಮಂಜಣ್ಣ, ಇನ್ನಿಬ್ಬರಿಗೆ ಮಾರಾಟ ಮಾಡಿರುತ್ತೇನೆ. ಸದರಿ ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸದರಿಯವರುಗಳು 15 ದಿನಗಳ ನಂತರ ಹಣವನ್ನು ನೀಡಿರುತ್ತಾರೆ. ಎಲ್ಲಾ ಕುರಿಗಳನ್ನು ಮೊದಲು ಕೊಟ್ಟು ನಂತರ ಹಣವನ್ನು ಪಡೆದಿರುತ್ತೇನೆ. ಸದರಿಯವರುಗಳು ನನಗೆ ನಗದು ರೂಪದಲ್ಲಿ ಹಣವನ್ನು ನೀಡಿರುತ್ತಾರೆ. ಸದರಿ ಹಣವನ್ನು ನಾನು ಮನೆಯಲ್ಲಿ ಇಟ್ಟಿದ್ದೇನು. ಸದರಿ ಹಣವನ್ನು ನಾನು ಅಂದಾಜು 3-4 ತಿಂಗಳುಗಳ ಕಾಲ ಮನೆಯಲ್ಲಿ ಇಟ್ಟುಕೊಂಡಿದ್ದೇನು ಕಾರಣ ಜಮೀನನ್ನು ಖರೀದಿ ಮಾಡಲು ಇಚ್ಚಿಸಿದ್ದೇನು. ನಾನು ಯಾವುದೇ ಕುರಿಗಳನ್ನು ಹೊಂದಿರಲಿಲ್ಲ ಮತ್ತು ಮಾರಾಟ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಜಮೀನನ್ನು ಕೋರಿ ಮಾಡುತ್ತಿದ್ದೆ ಎಂದರೆ ಸುಳ್ಳು.

ಪ್ರತಿವಾದಿಯ ಜಮೀನನ್ನು ಕೋರಿ ಮಾಡುತ್ತಿದ್ದ ಬಂದ ಆದಾಯದಿಂದ ಜೀವನವನ್ನು ನಡೆಸುತ್ತಿದ್ದೆ ಎಂದರೆ ಸುಳ್ಳು.

ನಾನು ಪ್ರತಿವಾದಿಗೆ ನಮ್ಮ ಮನೆಯಲ್ಲಿ ಸಾಲವನ್ನು ನೀಡಿರುತ್ತೇನೆ. ಪ್ರತಿವಾದಿಯು ನನ್ನ ಬಳಿ ಸಾಲವನ್ನು ಪಡೆಯುವ ಸಮಯದಲ್ಲಿ ಪ್ರಸನ್ನಕುಮಾರ, ಕಂಪಾಲಯ್ಯ, ತಿಪ್ಪೇಸ್ವಾಮಿರವರು ಹಾಜರಿದ್ದರು. ಸದರಿ ಪ್ರಸನ್ನಕುಮಾರ, ಕಂಪಾಲಯ್ಯ, ತಿಪ್ಪೇಸ್ವಾಮಿರವರಿಗೆ ಬರಲು ನಾನೇ ಹೇಳಿದ್ದೇನು. ದಿಃ14-07-2019 ರಂದು ಸದರಿ ಪ್ರಸನ್ನಕುಮಾರ, ಕಂಪಾಲಯ್ಯ, ತಿಪ್ಪೇಸ್ವಾಮಿರವರುಗಳು ನಮ್ಮ ಮನೆಯಲ್ಲಿ ಹಾಜರಿದ್ದರು. ಸದರಿಯವರು ನಮ್ಮ ಮನೆಯಲ್ಲಿ ಇದ್ದ ಸಮಯವನ್ನುಹೇಳಲು ಆಗುವುದಿಲ್ಲ. ಪ್ರತಿವಾದಿಯು ರೂ.4,60,000/- ಸಾಲವನ್ನು ದಿಃ14-07-2019 ರಂದು ನನ್ನಿಂದ ಪಡೆದಿರುತ್ತಾರೆ. ನಾನು, ಪ್ರತಿವಾದಿ, ಪ್ರಸನ್ನಕುಮಾರ, ಕಂಪಾಲಯ್ಯ, ತಿಪ್ಪೇಸ್ವಾಮಿರವರುಗಳನ್ನು ಹೊರತುಪಡಿಸಿ ಬೇರೆ ಯಾರು ಹಾಜರು ಇರಲಿಲ್ಲ. ಪ್ರತಿವಾದಿಯು ಸದರಿ ಸಾಲದ ಬಾಬ್ತು ನನಗೆ ಪ್ರಾಂಸರಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಪ್ರಾಂಸರಿ ಪತ್ರವನ್ನು ನಾನೇ ತಂದಿರುತ್ತೇನೆ. ಪ್ರಾಂಸರಿ ಪತ್ರವನ್ನು ಬರೆಯುವಂತೆ ನಾನೇ ಮಾಹಿತಿಯನ್ನು ತಿಪ್ಪೇಸ್ವಾಮಿಯವರಿಗೆ ನೀಡಿರುತ್ತೇನೆ. ಅದರಂತೆ ತಿಪ್ಪೇಸ್ವಾಮಿಯವರು ಪ್ರಾಂಸರಿ ಪತ್ರವನ್ನು ಬರೆದಿರುತ್ತಾರೆ. ಪ್ರಾಂಸರಿ ಪತ್ರವನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಬರೆದರು ಎಂದು ನನಗೆ ನೆನಪಿಲ್ಲ. ಪ್ರಾಂಸರಿ ಪತ್ರವನ್ನು ಚಳ್ಳಕೆರೆಯ ಕಲ್ಲೇಶ ಜರಾಕ್ಸ್ ಅಂಗಡಿಯಿಂದ ತಂದು ನನ್ನ ಬಳಿ ಇಟ್ಟುಕೊಂಡಿದ್ದೇನು. ಪ್ರತಿವಾದಿಯು ನನಗೆ ಸಾಲವನ್ನು ಕೇಳಿದ ಒಂದು ವಾರ, 15 ದಿನಗಳ ನಂತರ ತೆಗೆದುಕೊಂಡು ಬಂದಿದ್ದೇನು. ರೆವಿನ್ಯೂ ಸ್ಟ್ಯಾಂಪ್ ನ್ನು ಒಬ್ಬ ಮೇಷ್ಟ್ರ ಬಳಿ ಪಡೆದಿರುತ್ತೇನೆ. ಸದರಿ ರೆವಿನ್ಯೂ ಸ್ಟ್ಯಾಂಪ್ ಗಳನ್ನು ಕರ್ನಾಟಕ ಸರಕಾರವು ರದ್ದುಗೊಳಿಸಿ ಸುಮಾರು ವರ್ಷಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ನಮ್ಮ ರಾಜ್ಯದಲ್ಲಿ ರೆವಿನ್ಯೂ ಸ್ಟ್ಯಾಂಪ್ ಗಳು ಲಭ್ಯವಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಪ್ರಾಂಸರಿ ಪತ್ರಕ್ಕೆ ಮೊದಲು ಪ್ರಸನ್ನಕುಮಾರವರು ಸಹಿ ಮಾಡಿರುತ್ತಾರೆ. ನಂತರ ಕಂಪಾಲಯ್ಯ ಸಹಿ ಮಾಡಿರುತ್ತಾರೆ. ತಿಪ್ಪೇಸ್ವಾಮಿಯವರು ಪ್ರಾಂಸರಿ ಪತ್ರವನ್ನು ಬರೆದು ಸಹಿ ಮಾಡಿರುತ್ತಾರೆ. ತದನಂತರ ಪ್ರತಿವಾದಿಯವರು ನನ್ನಿಂದ ಹಣವನ್ನು ಪಡೆದು ಸಹಿ ಮಾಡಿರುತ್ತಾರೆ. ಪ್ರತಿವಾದಿಯು ನನ್ನಿಂದ ಹಣವನ್ನು ಪಡೆದ ನಂತರವೇ ಪ್ರಾಂಸರಿ ಪತ್ರಕ್ಕೆ ಸಹಿ ಮಾಡಿರುತ್ತಾರೆ. ಪ್ರತಿವಾದಿಯೇ ಕಟ್ಟ ಕಡೆಯದಾಗಿ ಸಹಿ ಮಾಡಿರುತ್ತಾರೆ. ನಾನು ಪ್ರತಿವಾದಿಗೆ

ಸಾಲವನ್ನು ನೀಡಿದ ನೋಟಿನ ಮುಖಬೆಲೆ ನನಗೆ ನೆನಪಿಲ್ಲ. ಒಂದು ಲಕ್ಷದ 4 ಕಟ್, 50 ಸಾವಿರ ರೂ. ಒಂದು ಕಟ್ ಮತ್ತು 10 ಸಾವಿರ ರೂ. ಒಂದು ಕಟ್ ನೋಟುಗಳನ್ನು ಪ್ರತಿವಾದಿಗೆ ನೀಡಿರುತ್ತೇನೆ. ಪ್ರಾಂಸರಿ ವ್ಯವಹಾರವನ್ನು ಹೊರತುಪಡಿಸಿ ಆ ದಿನ ಬೇರೆ ವ್ಯವಹಾರ ಆಗಿರುವುದಿಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸದರಿ ಕೋರಿಕೆಯನ್ನು ಅನುಮತಿಸಲಾಯಿತು ಮತ್ತು ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.